# <u>ಶರಣು ಬೆನಕನೆ ಕನಕ ರೂಪನೆ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 03.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 108.
3. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 04.
4. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Gorebala Hanumantha Rayaru.
5. **Note:** Lyrics given in both the above references are almost same and these wordings are followed by the singer.

ರಾಗ: ಸೌರಾಷ್ಟ್ರ ತಾಳ: ಛಾಪು

ಶರಣು ಬೆನಕನೆ ಕನಕ ರೂಪನೆ, ಕಾಮಿನಿ ಸಂಗ ದೂರನೇ
ಶರಣು ಸಾಂಬನ ಪ್ರೀತಿ ಪುತ್ರನೆ, ಶರಣು ಜನರಿಗೆ ಮಿತ್ರನೆ || ಪ ||

ಏಕದಂತನೆ ಲೋಕ ಖ್ಯಾತನೆ, ಏಕ ವಾಕ್ಯ ಪ್ರವೀಣನೇ
ಏಕ ವಿಂಶತಿ ಪತ್ರ ಪೂಜಿತನೇಕ ವಿಘ್ನ ವಿನಾಯಕ || ೧ ||

ಲಂಬಕರ್ಣನೆ ನಾಸಿಕಾಧರನೆ, ಗಾಂಭೀರ್ಯ ಇವ ಗುಣಸಾರನೇ
ಕಂಬುಕಂಧರ ಇಂದು ಮೌಳಿಜ, ಚಂದನ ಚರ್ಚಿತಾಂಗನೇ || ೨ ||

ಚತುರ್ಬಾಹು ಚರಣ ತೊಡಲನೆ, ಚತುರ ಆಯುಧ ಧಾರನೇ
ಮತಿಯವಂತನೆ ಮಲಿನ ಜಲಿತನೆ, ಅತಿಯ ಮಧುರಾಹಾರನೇ || ೩ ||

ವಕ್ರತುಂಡನೆ ಮಹಾಕಾಯನೆ, ಅರ್ಕಕೋಟಿ ಪ್ರದೀಪನೇ
ಚಕ್ರಧರ ಹರ ಬ್ರಹ್ಮ ಪೂಜಿತ, ರಕ್ತ ವಸ್ತ್ರಾಧಾರನೇ || ೪ ||

ಮೂಷಿಕಾಸನ ಶೇಷಭೂಷಣ, ಅಶೇಷ ವಿಘ್ನ ವಿನಾಯಕ
ದಾಸ ಪುರಂದರ ವಿಠ್ಠಲೇಶನ ಈಶ ಗುಣಗಳ ಪೊಗಳುವೆ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಬೆನಕ** – ವಿನಾಯಕನೆಂಬ ಸಂಸ್ಕೃತ ಪದದ ಕನ್ನಡ ರೂಪ.

**ಕಾಮಿನಿ ಸಂಗ ದೂರ** – ಬ್ರಹ್ಮಚಾರಿ.

**ಏಕ ವಾಕ್ಯ ಪ್ರವೀಣ** – ಸರ್ವ ಶಾಸ್ತ್ರಗಳ ಸಮನ್ವಯದಲ್ಲಿ ಕುಶಲ.

**ಲಂಬ ಕರ್ಣ** – ಅಗಲವಾದ ಕಿವಿಗಳು.

**ನಾಸಿಕಾಧರ** – ಸೊಂಡಿಲನ್ನುಳ್ಳವನು.

**ಕಂಬು ಕಂಧರ** – 'ಕಂಬು' ಎಂದರೆ ಆನೆಯೆಂಬ ಅರ್ಥವಿದೆ (ನಾನಾರ್ಥ ರತ್ನಮಾಲಾ); ಆನೆಯ ಮೊಗದವನು ಎಂದು ಅರ್ಥವಾದೀತು. 'ಕಂಬು' ಎಂದರೆ ಶಂಖವೂ ಆಗುತ್ತದೆ; ಶಂಖದಂತೆ ಚೆಲುವಾದ ಕತ್ತು ಉಳ್ಳವನು.

**ಇಂದು ಮೌಳಿಜ** – ಶಿವನ ಮಗ (ಚಂದ್ರನನ್ನು ತಲೆಯಲ್ಲಿ ತೊಟ್ಟವನು ಇಂದುಮೌಳಿ).

**ಚತುರ ಆಯುಧ** – ನಾಲ್ಕು ಆಯುಧಗಳನ್ನು ಧರಿಸಿದವನು (ಪಾಶ, ಅಂಕುಶ, ದಂತ, ಮುಸಲ).

**ಮಲಿನಜನಿತ** – ಗೌರಿಯು ತನ್ನ ಮೈಯ ಜಿಡ್ಡಿನಿಂದ ಗೊಂಬೆಯನ್ನು ಮಾಡಿ, ಅದಕ್ಕೆ ಜೀವಕಳೆಯನ್ನು ಕೊಟ್ಟಳೆಂದೂ, ಅದೇ ಗಣಪತಿಯಾಯಿತೆಂದೂ ಕತೆ.

**ಅತಿಯ ಮಧುರಾಹಾರ** – ಕಬ್ಬು; ಆನೆಗೆ ಪ್ರಿಯವಾದುದು.

**ವಕ್ರತುಂಡ** – ಬಾಗಿದ ಸೊಂಡಿಲುಳ್ಳವನು.

**ಅರ್ಕಕೋಟಿ ಪ್ರದೀಪ** – ಕೋಟಿ ಸೂರ್ಯ ಪ್ರಕಾಶ.

**ಚಕ್ರಧರ** – ವಿಷ್ಣು.

**ರಕ್ತ ವಸ್ತ್ರಾಧಾರ** – ರಕ್ತ ವಸ್ತ್ರಧರ; ಕೆಂಪು ಬಣ್ಣದ ಬಟ್ಟೆಯನ್ನುಟ್ಟವನು.

**ಶೇಷ ಭೂಷಣ** – ಹಾವನ್ನು ಆಭರಣವಾಗಿ ಹೊಂದಿರುವವನು.

**ಅಶೇಷ ವಿಘ್ನ ವಿನಾಯಕ** – ಎಲ್ಲ ತೊಡರುಗಳನ್ನೂ ತೊಲಗಿಸುವವನು.

**ಈಶ ಗುಣಗಳ** – ದೇವತೆಗಳಿಗೆಲ್ಲ ಒಡೆಯನಾಗಿ ಹೊಂದಿರುವ ಕಲ್ಯಾಣ ಗುಣಗಳನ್ನು.

**Classification:** Keerthane
**Ankita:** Purandara Vittala
**Location:** NA
**Category:** Ganesha Stuti
**Sub-Category:** Sharanu, ganesha, bangara, preeti, jana, mitra, kivi, gandha, chakra, brahma, shiva, puje, rakta, ili, uraga,
**Pravachana:** NA
**Explanation:** NA